ಹನಿ ಮತ್ತು ತುಂತುರು ಹನಿ ನೀರಾವರಿ :

460 (4831) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ (ಹುಕ್ಕೇರಿ) :- ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ರಾಜ್ಯದಲ್ಲಿ ತೋಟಗಾರಿಕೆ ಬೆಳೆಯನ್ನು ಬೆಳೆಯಲು ಪೂರ್ಣ ಪ್ರಮಾಣದ ಸಬ್ಸಿಡಿಯನ್ನು ನೀಡಲಾದ ತಾಲ್ಲೂಕುಗಳೆಷ್ಟು; (ವಿವರ ನೀಡುವುದು);

ಆ) ಹುಕ್ಕೇರಿ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ವರ್ಗಗಳ ಜನಸಂಖ್ಯೆಯು ಜಾಸ್ತಿ ಇದ್ದು, ಬೇರೆ ತಾಲ್ಲೂಕಿನಲ್ಲೂ ಸಬ್ಸಿಡಿ ನೀಡುತ್ತಿದ್ದಂತೆ ಈ ತಾಲ್ಲೂಕಿನಲ್ಲಿಯೂ ಸಬ್ಸಿಡಿ ನೀಡಲಾಗುವುದೇ ಹಾಗೂ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುವುದೆ?

ಶ್ರೀ ಆರ್. ಶ್ರೀನಿವಾಸ (ತೋಟಗಾರಿಕೆ ಸಚಿವರು) :

ಅ) 2004-05ನೇ ಸಾಲಿನಲ್ಲಿ ರಾಜ್ಯದಲ್ಲಿ ಬಿಜಾಪುರ, ಕೋಲಾರ ಜಿಲ್ಲೆಗಳಲ್ಲಿ ಹಾಗೂ ಇತರ ಜಿಲ್ಲೆಗಳಲ್ಲಿ ಗಂಗಾಕಲ್ಯಾಣ ಯೋಜನೆಯ ಫಲಾನುಭವಿಗಳು ಒಳಗೊಂಡಂತೆ ಒಟ್ಟು 47 ತಾಲ್ಲೂಕುಗಳಲ್ಲಿ ಶೇಕಡಾ 100ರ ಪ್ರಮಾಣದಲ್ಲಿ ಸಹಾಯಧನ ನೀಡಲಾಗಿದೆ. ವಿವರಗಳು ಈ ಕೆಳಕಂಡಂತಿದೆ :

ಜಿಲ್ಲೆ	ತಾಲ್ಲೂಕು	ತಾಲ್ಲೂಕುಗಳ ಸಂಖ್ಯೆ
ದಾವಣಗೆರೆ	ಹೊನ್ನಾಳಿ, ಚೆನ್ನಗಿರಿ	2
ಚಿತ್ರದುರ್ಗ	ಹೊಸದುರ್ಗ, ಚಿತ್ರದುರ್ಗ, ಹೊಳಲ್ಕೆರೆ	3
ಶಿವಮೊಗ್ಗ	ಭದ್ರಾವತಿ, ಸಾಗರ, ಶಿಕಾರಿಪುರ	3
ಕೋಲಾರ	ಬಾಗೇಪಲ್ಲಿ, ಬಂಗಾರಪೇಟೆ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಕೋಲಾರ, ಮಾಲೂರು, ಮುಳಬಾಗಿಲು, ಶಿಡ್ಲಘಟ್ಟ ಶ್ರೀನಿವಾಸಪುರ	10
ಬಿಜಾಪುರ	ಬಿಜಾಪುರ, ಇಂಡಿ, ಬಸವನಬಾಗೇವಾಡಿ ಸಿಂದಗಿ, ಮುದ್ದೇಬಿಹಾಳ,	5
ತುಮಕೂರು	ತುಮಕೂರು, ಚಿಕ್ಕನಾಯಕನಹಳ್ಳಿ, ಕುಣಿಗಲ್	3